ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಮಾನ್ಯ ಸಚಿವರು ಅರ್ಯಾಕ್‌ನಲ್ಲಿ ಉತ್ಪತ್ತಿ ಜಾಸ್ತಿಯಾಗಿದೆ ಎಂದು ಹೇಳಿದರು. ನಾನು ಒಂದು ಕೇಳುತ್ತೇನೆ. ನೀವು ಅರ್ಯಾಕ್‌ನ್ನು ಗವರ್ನಮೆಂಟ್ ಡಿಪೋದಿಂದ ಎಷ್ಟು ಡ್ರಾ ಮಾಡುತ್ತೀರಿ, ಅವರು ಅಷ್ಟು ಕಟ್ಟುತ್ತಾರಾ? ಅವರು ಅರ್ಯಾಕ್ ಡ್ರಾ ಮಾಡುವಷ್ಟು ಇಲ್ಲಿ ಕಿಸ್ತು ಕಟ್ಟುವುದಕ್ಕೂ ಸಂಬಂಧವೇ ಇಲ್ಲ. ಅರ್ಯಾಕ್ ಕಡಿಮೆ ಡ್ರಾ ಮಾಡುತ್ತಾರೆ ಮತ್ತು ಕಿಸ್ತು ಜಾಸ್ತಿ ಕಟ್ಟುತ್ತಾರೆ. ಹಾಗಾದರೆ ಇದು ಎಲ್ಲಿಂದ ಬಂತು? ಅವರು illicit liquor manufacture ಮಾಡುತ್ತಾರೆ. ಅದೂ ಅಲ್ಲದೆ ಬೇರೆಯವರೂ ಕೂಡ ಮಾಡುತ್ತಿದ್ದಾರೆ. ಆದ್ದರಿಂದ ದಯವಿಟ್ಟು ಈ ಲೈಸೆನ್ಸ್ ಕ್ಯಾನ್ಸಲ್ ಮಾಡುತ್ತಿರುವಂಥಾದ್ದು ಮತ್ತು ಬ್ಯಾಮಕ್ ಗ್ಯಾರಂಟಿ ಕೊಡುವಂತಹ ಪದ್ಧತಿಯನ್ನು ತರಲೇಬೇಡಿ. ಇದನ್ನು ತಂದಾಗ illicit liquor transporation ಜಾಸ್ತಿಯಾಗುತ್ತದೆ.

(ಗೊಂದಲ)

(ಕೆಲವು ಸದಸ್ಯರುಗಳು ತಮಗೆ ಮಾತನಾಡಲಿಕ್ಕೆ ಅವಕಾಶ ಕೊಡಬೇಕೆಂದು ಒತ್ತಾಯಿಸಿದರು)

ಅಧ್ಯಕ್ಷರು : ಇಲ್ಲ ಸಾಧ್ಯವಿಲ್ಲ. ಮಂತ್ರಿಗಳು ಸಮರ್ಪಕವಾಗಿ ಉತ್ತರ ಹೇಳಿದ್ದಾರೆ. ಹೆಚ್ಚು ಕಡಿಮೆ ನೂರು ಪ್ರಶ್ನೆಗಳನ್ನು ಕೇಳಿದ್ದಾರೆ.

ಶ್ರೀ ಬಿ. ಸೋಮಶೇಖರ್ : ಇದನ್ನು ಪ್ರತಿಭಟಿಸಿ ನಾವು ಸಭಾತ್ಯಾಗ ಮಾಡುತ್ತೇವೆ.

(ಈ ಹಂತದಲ್ಲಿ ಬಿ.ಜೆ.ಪಿ ಮತ್ತು ಎ.ಬಿ.ಜೆ.ಡಿ. ಸದಸ್ಯರುಗಳು ಸಭಾತ್ಯಾಗ ಮಾಡಿದರು)

ಅಧ್ಯಕ್ಷರು : ಪ್ರಸ್ತಾವ ಏನೆಂದರೆ :

"2003ನೇ ಸಾಲಿನ ಕರ್ನಾಟಕ ಅಬ್ಕಾರಿ (ತಿದ್ದುಪಡಿ)
ವಿಧೇಯಕವನ್ನು ಪರ್ಯಾಲೋಚಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ 2 ರಿಂದ 4ವರೆಗೆ, ಎರಡೂ ಸೇರಿದಂತೆ,

ಪ್ರಸ್ತಾವ ಏನೆಂದರೆ :–

ಅಧ್ಯಕ್ಷರು : "ಖಂಡ 2 ರಿಂದ 4ವರೆಗೆ, ಎರಡೂ ಸೇರಿದಂತೆ,
ವಿಧೇಯಕದ ಅಂಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ರಿಂದ 4ರವರೆಗೆ, ಎರಡೂ ಸೇರಿದಂತೆ, ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ :

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ
ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ
ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಎಂ. ನಾಣಯ್ಯ (ಅಬ್ಕಾರಿ ರಾಜ್ಯ ಸಚಿವರು) : ಮಾನ್ಯ ಅಧ್ಯಕ್ಷರೆ, "2003ನೇ ಸಾಲಿನ ಕರ್ನಾಟಕ ಅಬ್ಕಾರಿ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.